ನಿಯಮ ೩೩ಳಿಗರ ಮೇರೆಗೆ

(i) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುಡಿ ಕೈಗಾರಿಕಾ ವೃತ್ತಿಯನ್ನು ಮಾಡುವವರಿಗೆ ಬಿದಿರನ್ನು ಅರಣ್ಯದಿಂದ ಒದಗಿಸುವುದು.

ಶ್ರೀ ಕೆ. ಕುಶಾಲ (ಸುಳ್ಯ ಕ್ಷೇತ್ರ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆತ್ತ, ಬಿದಿರು ಮತ್ತು ಮರದ ಬಳ್ಳಿಗಳಿಂದ ಕುರ್ಚಿ, ಬುಟ್ಟಿ, ಮುಂತಾದವುಗಳನ್ನು ಕೈಯಿಂದ ತಯಾರಿಸುವ ಕುಶಲ ಗುಡಿ ಕೈಗಾರಿಕೆ ವೃತ್ತಿಯನ್ನು ಮಾಡುವಂತಹ ಕಸಬುದಾರರಿದ್ದು ಅರಣ್ಯಗಳಿಂದಲೇ ಸದ್ರಿ ಕೈಗಾರಿಕೆ ಕೆಲಸಗಳಿಗೆ ಸಾಮಗ್ರಿಗಳನ್ನು ಸಂಗ್ರಹಿಸಿ ತಯಾರು ಮಾಡಬೇಕಾಗಿರುತ್ತದೆ. ರಾಷ್ಟ್ರೀಯ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮದಲ್ಲಿ ಕೂಡ ಈ ಕಸಬುದಾರರಿಗೆ ಅರಣ್ಯಗಳಿಂದ ಉಚಿತವಾಗಿ ಸಲಕರಣೆಗಳನ್ನು ಪಡೆಯುವಂತೆ ಕಾನೂನಿನಲ್ಲಿ ಅವಕಾಶ ಮಾಡಿರುತ್ತದೆ. ಅರಣ್ಯ ಇಲಾಖೆಯಿಂದ ಈ ಸಲಕರಣೆಗಳನ್ನು ಒದಗಿಸುವ ಏರ್ಪಾಡು ಇದ್ದರೂ ಇದರಲ್ಲಿ ಈ ಜನರು ವಂಚಿತರಾಗಿದ್ದಾರೆ. ಪಸಿ ಸಾಮಗ್ರಿಗಳನ್ನು ಒದಗಿಸುವ ಬದಲು ಒಣಗಿದ ಕೆಲಸಕ್ಕೆ ಬಾರದಿರುವಂಥವುಗಳನ್ನು ಕೊಟ್ಟು ವರ್ಷಕ್ಕೊಮ್ಮೆ ಹೆಸರಿಗೆ ಮಾತ್ರವೇ ಒಂದೆರಡು ಒದಗಿಸುವ ಕ್ರಮ ತೋರಿಸಿರುವುದರಿಂದ ವಂಚಿತರಾಗಿರುತ್ತಾರೆ.

ಆಲ್ಲದೆ ಅರಣ್ಯ ಇಲಾಖೆಯವರು ಅರಣ್ಯದಿಂದ ಸಲಕರಣೆಗಳನ್ನು ಪಡೆಯಲು ಪರವಾನಿಗೆ ಕೊಡುತ್ತಿದ್ದು ಈ ಪರವಾನಿಗೆ ಕೊಡುವುದನ್ನು ಕೂಡ ನಿಲ್ಲಿಸಿದ್ದು ಮಾತ್ರವಲ್ಲದೆ ಈ ಕಸಬುದಾರರಿಗೆ ಕಿರುಕುಳ ಕೊಡುತ್ತಿದ್ದಾರೆ ಎಂದು ಮನವಿ ಮಾಡಿರುತ್ತಾರೆ. ಈ ಜನರು ಗುಡಿ ಕೈಗಾರಿಕೆಗಳಿಗೆ ಬ್ಯಾಂಕ್ ನಿಂದ ಸಾಲ ವಗೈರೆ ಪಡೆದುಕೊಂಡು ಬ್ಯಾಂಕ್‌ಗೆ ಕಂತು ಕಟ್ಟಲು ಅಸಾಧ್ಯವಾಗಿದೆ ಇದರಿಂದಾಗಿ ಸದರಿ ಕೈಗಾರಿಕೆ ವೃತ್ತಿಯನ್ನು ನಿಲ್ಲಿಸುವ ಪ್ರಸಂಗ ಬಂದಿದೆ. ಆದುದರಿಂದ ಸರಕಾರ ಈ ಕಸುಬಿನವರಿಗೆ ಈ ಮೊದಲಿನಂತೆ ಅರಣ್ಯಗಳಿಂದ ಸಲಕರಣೆಗಳನ್ನು ಪಡೆಯಲು ಪರವಾನಿಗೆ ನೀಡುವಂತೆ ಉಚಿತವಾಗಿ ವಿತರಣೆ ಮಾಡುವ ಅವಕಾಶವನ್ನು ಸರಿಯಾಗಿ ಮಾಡಬೇಕಾಗಿ ಸರಕಾರವನ್ನು ಕೋರುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).— ಅಧ್ಯಕ್ಷರೆ, ವರದಿಯನ್ನು ತರಿಸಿ ನಾಳೆ ಉತ್ತರ ಕೊಡುತ್ತೇನೆ.

(ii) ರಾಜ್ಯದಲ್ಲಿರುವ ಹರಿಜನ ಗಿರಿಜನ ವಿದ್ಯಾರ್ಥಿ ನಿಲಯಗಳ ಪರಿಸ್ಥಿತಿ

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ರಾಜ್ಯದ ಎಲ್ಲಾ ಕಡೆಗಳಲ್ಲಿ ಹಿಂದುಳಿದ ವರ್ಗದ ಹರಿಜನ ಗಿರಿಜನ ವಿದ್ಯಾರ್ಥಿ ನಿಲಯಗಳನ್ನು ಬಹಳ ಕಳಪೆ ರೀತಿಯಿಂದ ನಡೆಸುತ್ತಿರುವುದು ಕೇಳಿ ಬರುತ್ತಿದೆ. ಈಗ ನಡೆಯುತ್ತಿರುವ ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲಿ ಊಟದ ತಟ್ಟೆಗಳು ಕುಡಿಯುವ ಲೋಟಗಳು ನೀರಿರುವ ಮಗ್ಗುಗಳು ತೂತು ಬಿದ್ದಿರುತ್ತವೆ ಆಲ್ಲದೆ ಇವು ಬಹಳ ಹಳೆಯದಾಗಿರುತ್ತವೆ. ಸ್ನಾನ ಮಾಡಲು ಬಕೇಟುಗಳಿಲ್ಲ. ವಿದ್ಯಾರ್ಥಿಗಳು ವಾಸಿಸುವ ಕೊಠಡಿ, ಅಡಿಗೆಮನೆ ಕೊಳೆತು ನಾರುವ ಕೇಂದ್ರದಲ್ಲಿ ಮಕ್ಕಳು ವಾಸವಾಗಿರುತ್ತವೆ. ಅವರಿಗೆ ಕೊಡುವ ಆಹಾರ ಎಣ್ಣೆ ಸೋಪು ದಿನ ಪತ್ರಿಕೆ ಇತರ ಸೌಲಭ್ಯಗಳು ಯಾವುದೂ ಮಕ್ಕಳಿಗೆ ತಲುಪುವುದಿಲ್ಲ. ನೂರು ಜನ ವಿದ್ಯಾರ್ಥಿಗಳು ಇರುವ ವಿದ್ಯಾರ್ಥಿನಿಲಯಕ್ಕೆ ಕೇವಲ ಒಂದು ಕೆ.ಜಿ. ತರಕಾರಿಯನ್ನು ಒದಗಿಸುವುದನ್ನು ಮಕ್ಕಳ ಹೆಸರಿನಲ್ಲಿ ಅಧಿಕಾರಿಗಳು ತಿನ್ನು ಹಾಕುತ್ತಿದ್ದಾರೆ. ಬೆಂಗಳೂರಿಗೆ ಹತ್ತಿರವಿರುವ ತುಮಕೂರಿನ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಹರಿಜನ ಗಿರಿಜನ ಪದವೀಧರರ ವಿದ್ಯಾರ್ಥಿಗಳು ಸುಮಾರು ೧೦೦–೧೫೦ ಜನ ಇದ್ದು ಅವರಿಗೆ ಕೂಡ ಮೇಲ್ಕಂಡ ಸೌಲಭ್ಯಗಳನ್ನು ಕೊಡುತ್ತಿರುವುದನ್ನು ನೋಡಿದರೆ ವಿಷಾದಕರವಾಗಿದೆ. ರಾಜ್ಯದ ಎಲ್ಲಾ ಕಡೆ ನಡೆಯುತ್ತಿರುವ ಅತಿ ಕೀಳುಮಟ್ಟದ ವ್ಯವಸ್ಥೆಯನ್ನು ನಿಲ್ಲಿಸಿ ಮಕ್ಕಳ ಹೆಸರಿನಲ್ಲಿ ಅಧಿಕಾರಿಗಳು ಹಣ ಕೊಳ್ಳೆ ಹೊಡೆಯುತ್ತಿರುವುದನ್ನು ಸದನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ವಿ.ಎಲ್. ಪಾಟೀಲ್. — ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಾ ಹಾಸ್ಟಲುಗಳೂ ಸಹ ಹಾಗೆ ಇಲ್ಲ. ಈ ಬಗ್ಗೆ ಕೆಲವು ಕಡೆ ದೂರು ಬಂದಿದೆ. ದೂರು ಬಂದ ಕಡೆಗಳಲ್ಲಿ ಹೋಗಿ ನಾವು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಎಲ್ಲೆಲ್ಲಿ ಏಡೆಡ್ ಹಾಸ್ಟೆಲ ಗಳು

ಇವೆ ಆಂಥಾ ಕಡೆಗಳಲ್ಲಿ ನೂರು ಬಂದರೆ ಏನ್‌ಕ್ವೈರಿ ಮಾಡಿ ಅದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಸರ್ಕಾರೀ ಹಾಸ್ಟೆಲ್ಸ್‌ಗಳು ಏನು ಇವೆ ಅಲ್ಲಿಗೆ ಆಗಾಗ್ಗೆ ಹೋಗಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಮತ್ತು ಈಗ ಮಾನ್ಯ ಸದಸ್ಯರು ತುಮಕೂರಿನ ಕಾನೂನು ಕಾಲೇಜಿನ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ಖುದ್ದಾಗಿ ಎನ್‌ಕ್ವೈರಿ ಮಾಡಿಸಲಿಕ್ಕೆ ಹಚ್ಚುತ್ತೇನೆ. ಏನಾದರೂ ಅದರಲ್ಲಿ ಲೋಪದೋಷಗಳು ಇದ್ದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ. ಈಗ ತಾನೇ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿದ್ದಾರೆ, ಆ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

(iii) ಬೆಂಗಳೂರಿನ ಚಿತ್ರ ಮಂದಿರಗಳ ನೌಕರರ ಮುಷ್ಕರ

ಶ್ರೀ ಜಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಿಂದ ಇಡೀ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಎಲ್ಲಾ ಚಿತ್ರಮಂದಿರಗಳು ಬಂದ್ ಆಗಿದ್ದು ಚಿತ್ರ ಮಂದಿರಗಳ ನೌಕರರು ಪೈಕೋರ್ಟಿನ ತೀರ್ಪಿನಂತೆ ವೇತನ ಮತ್ತು ತುಟ್ಟಿಭತ್ಯೆ ಕೊಡಬೇಕೆಂದು ಚಿತ್ರಮಂದಿರಗಳ ಮಾಲೀಕರಿಗೆ ಮಾಡಿದ ಮನವಿಗಳು ವಿಫಲವಾಗಿ ಅನಿವಾರ್ಯವಾಗಿ ಅವರು ಮುಷ್ಕರ ನಡೆಸುತ್ತಿರುವುದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಅನಿವಾರ್ಯವಾಗಿ ನ್ಯಾಯುವಾದ ಬೇಡಿಕೆ ಈಡೇರದಿದ್ದಕ್ಕೆ ಸಾರ್ವಜನಿಕರು ಈ ಚಳುವಳಿಯಲ್ಲಿ ಪ್ರವೇಶ ಮಾಡುವ ಸಂದರ್ಭವಿದೆ.

ಕಳೆದ ಒಂದು ವಾರದಿಂದ ಚಿತ್ರಮಂದಿರಗಳ ಬಂದ್‌ನಿಂದ ಚಿತ್ರಪ್ರೇಮಿಗಳಿಗೂ ತೊಂದರೆ ಆಗಿದೆ. ತಕ್ಷಣ ಸರ್ಕಾರ ಮಧ್ಯ ಪ್ರವೇಶಿಸಿ, ನೌಕರರ ನ್ಯಾಯವಾದ ಬೇಡಿಕೆಯನ್ನು ಈಡೇರಿಸುವಂತೆ ಚಿತ್ರ ಮಂದಿರಗಳ ಮಾಲೀಕರ ಮನವೊಲಿಸುವ ಬಗ್ಗೆ ಈವರೆಗೆ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದವರ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ (ಯುವಜನ ಸೇವಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಿಂದ ಚಲನಚಿತ್ರಮಂದಿರದ ಮಾಲೀಕರ ಮತ್ತು ನೌಕರರ ಮುಷ್ಕರದಿಂದಾಗಿ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಲೇಬರ್ ಕಮಿಷನರ್ ಇವೊತ್ತು ೧೧ ಗಂಟೆಗೆ ಮೀಟಿಂಗ್ ಅನ್ನು ಕರೆದಿದ್ದರು. ಈ ವಿಷಯವನ್ನು ಬಗೆಹರಿಬೆಸಕೆದುಕರೆದಿದ್ದರು ಮೊನ್ನೆ ಶನಿವಾರ ಸಹ ಲೇಬರ್ ಕಮೀಷನರ್ ಒಂದು ಇನ್‌ಫಾರ್ಮಲ್ ಮೀಟಿಂಗ್‌ನ್ನು ಸಹ ಕರೆದಿದ್ದರು. ಆಮೀಟಿಂಗ್‌ಗೆ ಮಾಲೀಕರು ಬರಲಿಲ್ಲ, ನೌಕರರು ಬಂದಿದ್ದರು. ಮತ್ತೆ ಆ ವಿಷಯವಾಗಿ ಮಾತುಕತೆ ನಡೆಯುವುದಕ್ಕೆ ಇವೊತ್ತು ೧೧ ಗಂಟೆಗೆ ಮೀಟಿಂಗ್ ಇಟ್ಟಿದ್ದರು. ಅದರಲ್ಲಿ ಏನಾಯಿತೋ ಏನೋ ಇನ್ನೂ ಗೊತ್ತಿಲ್ಲ. ನಾಳೆ ದಿವಸ ವಿವರಗಳನ್ನು ತಿಳಿಸಿ ಇದರ ಪೂರ್ಣ ನಿರ್ಧಾರ ಏನಾಯಿತು ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

IV ರಾಜ್ಯದಲ್ಲಿ ೧೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವುದು :

ಶ್ರೀ ಆರ್. ಎನ್. ನಾಯ್ಕ.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಾದ್ಯಂತ ಹೋಟಲುಗಳಲ್ಲಿ ಮತ್ತು ಕೆಲವು ಕಾರ್ಖಾನೆಗಳಲ್ಲಿ ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಅಂಥ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದಲೂ ವಂಚಿತರಾಗುತ್ತಿದ್ದಾರೆ. ತಂದೆತಾಯಿಗಳಿಗೆ ಬಡತನವಿರುವುದರಿಂದಲೋ, ಅಥವಾ ಅವರ ನಿರ್ಲಕ್ಷ್ಯದಿಂದಲೋ ಈ ಹಸುಗೂಸುಗಳಿಗೆಲ್ಲಾ ಇಂಥ ಚಿಕ್ಕಪ್ರಾಯದಲ್ಲಿ ಈ ಪರಿಸ್ಥಿತಿ ಬಂದೊದಗಿದೆ. ಈ ಸಮಯದಲ್ಲಿ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಂಡರೆ ಅದು ಅಪರಾಧವಾಗಬಹುದು. ಹದಿನೈದು ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳನ್ನು ದಿನಕ್ಕೆ ೧೫ ತಾಸುಗಳವರೆಗೆ ಎಡಬಿಡದೇ ದುಡಿಸಿಕೊಳ್ಳಲಾಗುತ್ತದೆ. ಅಂಥವರಲ್ಲಿ ಕೆಲವರು